**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.**

**ಸಿ.ಸಿ.ನಂ.69/2017**

ಸರಕಾರದ ಪರವಾಗಿಃ ದೇವಲಗಾಣಗಾಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿತರುಃ 1. ಮಹಾಂತಪ್ಪ ತಂದೆ ಅಪ್ಪರಾವ ಪಾಟೀಲ,
43 ವರ್ಷ, ಉಃ ಡ್ರೈವರ ಕೆಲಸ,
ವಾಸಃ ಅತನೂರ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

2. ಕುತುಬ ತಂದೆ ಮಹಿಬೂಬುಸಾಬ ನದಾಪ,
32 ವರ್ಷ, ಉಃ ಕ್ಲೀನರ ಕೆಲಸ,
ವಾಸಃ ಅತನೂರ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

3. ಪ್ರವೀಣ ತಂದೆ ಶಿವಯ್ಯ ಗುತ್ತೇದಾರ,
48 ವರ್ಷ, ಉಃ ವ್ಯಾಪಾರ ಕೆಲಸ,
ವಾಸಃ ಅತನೂರ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ,
ಹಾಲಿ ವಾಸಃ ಗೋದುತಾಯಿ ನಗರ ಕಲಬುರಗಿ.

4. ದತ್ತಪ್ಪ ತಂದೆ ಸಾಯಬಣ್ಣ ನಾಯ್ಕೋಡಿ,
58 ವರ್ಷ, ಉಃ ಕೂಲಿ ಕೆಲಸ,
ವಾಸಃ ಸಾಗನೂರ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

5. ವಿಠಲ್ ತಂದೆ ಹಣಮಂತ ಡೆಂಗೆನ್ನವರ್,
28 ವರ್ಷ, ಉಃ ಕೂಲಿ ಕೆಲಸ,
ವಾಸಃ ಸಾಗನೂರ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

6. ಕಾಶೀನಾಂ,. ತಂದೆ ಲಾಲಪ್ಪ ಬೊರೋಟಿ,
48 ವರ್ಷ, ಉಃ ಕೂಲಿ ಕೆಲಸ,
ವಾಸಃ ಸಾಗನೂರ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು**

ಪ್ರ:1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 2 ಪ್ರಾಸಾ-02 ಭೀಮರಾಯ ಪಾಟೀಲ ತಂದೆ ಸಾಹೇಬಗೌಡ ಎ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 14.03.2017 ರಂದು ಠಾಣೆಯಲ್ಲಿದ್ದಾಗ ಸಾಗನೂರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಆರೋಪಿತರು ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಮೇರೆಗೆ ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ದಾಳಿ ಪಂಚರಾಗಲು ವಿಷಯ ತಿಳಿಸಿ ಸಿಬ್ಬಂದಿ ಚಾಸಾ-5 ರಿಂದ 8 ರವರನ್ನು ಕರೆದುಕೊಂಡು ಮುಂಜಾನೆ 10-15 ಗಂಟೆಗೆ ಘಟನಾ ಸ್ಥಳದ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ 4-5 ಜನರು ಜೀಪಿನಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವುದು ಖಚಿತಪಡಿಸಿಕೊಂಡು ದಾಳಿ ಮಾಡಿ ಒಬ್ಬ ಆರೋಪಿತನನ್ನು ಹಿಡಿದು ಆತನ ಹೆಸರು, ವಿಳಾಸ ಕೇಳಲಾಗಿ ಸದರಿ 1ನೇ ಆರೋಪಿ ಮಹಾಂತಗೌಡ ತಂದೆ ಅಪ್ಪಾರಾವ ಪಾಟೀಲ ಸಾಃ ಅತನೂರು ಎಂದು ತಿಳಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ:3: ಪ್ರಾಸಾ-2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಉಳಿದ ಆರೋಪಿತರು ಅಲ್ಲಿಂದ ಓಡಿ ಹೋಗಿದ್ದು, ಸದರಿ ವಾಹನದಲ್ಲಿ 650 ಎಂ ಎಲ್ ಅಳತೆಯ 48 ಕೆಎಫ್ ಬೀರ ಬಾಟಲಿಗಳು, 90 ಎಂ ಎಲ್ ಅಳತೆಯ 1056 ಒಸಿ ವಿಸ್ಕಿ ಪೌಚಗಳು, 180 ಎಂಎಲ್ ಅಳತೆಯ 144 ಒಸಿ ಪೌಚಗಳು, 180 ಎಂಎಲ್ ಅಳತೆಯ 192 ಒಟಿ ವಿಸ್ಕಿ ಪೌಚಗಳು, ನಗದು ಹಣ ರೂ.1200/-, ಜೀಪ್ ನಂ.ಕೆಎ-32-ಎಂ-573 ರಲ್ಲಿ ದೊರೆತಿದ್ದು, ಸಾರಾಯಿ ಮಾರಾಟದ ಪರವಾನಿಗೆ ಕೇಳಲು ಆತನ ಬಳಿ ಸಾರಾಯಿ ಮಾರಾಟದ ಪರವಾನಿಗೆ ಇರಲಿಲ್ಲ ಹಾಗೂ ಅಲ್ಲಿಂದ ಪರಾರಿಯಾಗಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 4 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆನಂತರ ಪಂಚರ ಸಮಕ್ಷಮ ಮುದ್ದೇಮಾಲನ್ನು ಜಪ್ತಿಪಡಿಸಿಕೊಂಡು ಶಾಂಪಲ್ ವರದಿಗೆಂದು ಒಂದೊಂದು ಪಾಕೇಟಗಳನ್ನು ಪ್ರತ್ಯೇಕವಾಗಿ ಶೀಲ್ ಮಾಡಿ ಪಂಚರು ಹಾಗೂ ತಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಲಾಯಿತು. ಆನಂತರ ಮುದ್ದೇಮಾಲು ಹಾಗೂ ಜಪ್ತಿಪಂಚನಾಮೆ ವರದಿಯೊಂದಿಗೆ ಠಾಣೆಗೆ ಹಾಜರಾಗಿ ಸರಕಾರಿ ತರ್ಫೆ ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿರುತ್ತೇನೆಂದು ಹಾಗೂ ದಿನಾಂಕಃ 15.03.2017 ರಂದು ಉಳಿದ ಆರೋಪಿತರ ಹೆಸರು ತಿಳಿದುಕೊಂಡು ಪುರವಣಿ ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ: 5 ಪ್ರಾಸಾ-03 ಮಹಿಬೂಬು ಕಂದಗೋಳ ತಂದೆ ಮಸ್ತಾನಸಾಬ ನಿವೃತ್ತ ಹೆಚ್.ಸಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 14.03.2017 ರಂದು ಮುಂಜಾನೆ 08-30 ಗಂಟೆಗೆ ಠಾಣೆಯಲ್ಲಿದ್ದಾಗ ಸಾಗನೂರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಆರೋಪಿತರು ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಮೇರೆಗೆ ಚಾಸಾ-1 ರವರು ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ದಾಳಿ ಪಂಚರಾಗಲು ವಿಷಯ ತಿಳಿಸಿ ಸಿಬ್ಬಂದಿ ಚಸಾ-6 ರಿಂದ 8 ರವರನ್ನು ಕರೆದುಕೊಂಡು ಮುಂಜಾನೆ 9-15 ಗಂಟೆಗೆ ಘಟನಾ ಸ್ಥಳದ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಮೂರು ಜನರು ಜೀಪಿನಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವುದು ಖಚಿತಪಡಿಸಿಕೊಂಡು ದಾಳಿ ಮಾಡಲು ಪ್ರಯತ್ನಿಸಿದ್ದಾಗ ಅವರು ಅಲ್ಲಿಂದ ಓಡಿ ಹೋಗಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ: 6 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಘಟನಾ ಸ್ಥಳದಲ್ಲಿ 650 ಎಂ ಎಲ್ ಅಳತೆಯ 48 ಬೀರ್ ಬಾಟಲಿಗಳು, 90 ಎಂ ಎಲ್ ಅಳತೆಯ 1056 ಒಸಿ ವಿಸ್ಕಿ ಪೌಚಗಳು, 180 ಎಂ ಎಲ್ ಅಳತೆಯ 144 ಒಸಿ ವಿಸ್ಕಿ ಪೌಚಗಳು, 180 ಎಂ ಎಲ್

ಅಳತೆಯ 192 ಒಟಿ ವಿಸ್ಕಿ ಪೌಚಗಳು, ನಗದು ಹಣ ರೂ.1200/- ದೊರೆತಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 7 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆನಂತರ ಪಂಚರ ಸಮಕ್ಷಮ ಮುದ್ದೇಮಾಲನ್ನು ಜಪ್ತಿಪಡಿಸಿಕೊಂಡು ಶಾಂಪಲ್ ವರದಿಗೆಂದು ಎಲ್ಲಾ ಬ್ರ್ಯಾಂಡನಿಂದ ಒಂದೊಂದು ಒಟ್ಟು 4 ಪಾಕೇಟಗಳನ್ನು ಪ್ರತ್ಯೇಕವಾಗಿ ಶೀಲ್ ಮಾಡಿ ಪಂಚರು ಹಾಗೂ ತಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಿದ್ದು, ಆನಂತರ ಚಾಸಾ-1 ರವರು ಮುದ್ದೇಮಾಲು ಹಾಗೂ ಜಪ್ತಿಪಂಚನಾಮೆ ವರದಿಯೊಂದಿಗೆ ಠಾಣೆಗೆ ಹಾಜರಾಗಿ ಸರಕಾರಿ ತರ್ಫೆ ಆರೋಪಿತನ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆಂದು ಹಾಗೂ ತಾನು ಶ್ಯಾಂಪಲ್ ಪ್ಯಾಕೇಟು ಹಾಗೂ ಬೀರ್ ಬಾಟಲಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ-1 ರಿಂದ 4 ಎಂದು ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ: 8 ಪ್ರಾಸಾ-04 ಸೋಮಶೇಖರ ತಂದೆ ಗುರಪ್ಪ ಹೆಚ್.ಸಿ-343 ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 14.03.2017 ರಂದು ಬೆಳಗ್ಗೆ 08-45 ಗಂಟೆಗೆ ತಾನು ಮತ್ತು ತನ್ನ ಠಾಣಾ ಸಿಬ್ಬಂದಿಗಳಾದ ಚಾಸಾ-5, ಚಾಸಾ-6 ಮತ್ತು 8 ರವರು ಠಾಣೆಯಲ್ಲಿದ್ದಾಗ ಚಾಸಾ-1 ರವರಿಗೆ ಸಾಗನೂರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಜೀಪ ನಂ.ಕೆಎ-32-ಎಂ-573 ನೇದ್ದರಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವ ಕುರಿತು ಬಾತ್ಮಿ ಬಂದಿದ್ದು, ಚಾಸಾ-4 ರವರಿಗೆ ಫೋನ ಮಾಡಿ ತಿಳಿಸಿದಾಗ ತದನಂತರ ಸದರಿಯವರು ಠಾಣೆಗೆ ಬರುವುದಾಗಿ ತಿಳಿಸಿದ್ದು, ಚಾಸಾ-4 ರವರು ತಾವು ಬರುವಾಗ ಚಾಸಾ-8 ರವರನ್ನು ಕರೆದುಕೊಂಡು ಬಂದು ಬೆಳಗ್ಗೆ 09-30 ಗಂಟೆಗೆ ತಮ್ಮ ಠಾಣಾ ಜೀಪ ನಂ.ಕೆಎ-35-ಜಿ-604 ನೇದ್ದರಲ್ಲಿ ಹಾಗೂ ಚಾಸಾ-4 ರವರು ಜೀಪ ನಂ.ಕೆಎ-35-ಜಿ-602 ನೇದ್ದರಲ್ಲಿ 09-30 ಗಂಟೆಗೆ ಠಾಣೆಯಿಂದ ಹೊರಟಿದ್ದು, ಸಾಗನೂರ ಕ್ರಾಸ ಹತ್ತಿರ ಹೋದಾಗ 10-15 ಗಂಟೆ ಆಗಿತ್ತು. ಚಾಸಾ-1 ರವರು ಚಾಸಾ-2 ಮತ್ತು 3 ರವರನ್ನು ದೂರವಾಣಿ ಕರೆ ಮಾಡಿ ಸ್ಥಳಕ್ಕೆ ಕರೆಯಿಸಿಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ: 9 ಪ್ರಾಸಾ-04 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಎಲ್ಲರೂ ಕೂಡಿಕೊಂಡು ಸಾಗನೂರ ಬಸ್ ನಿಲ್ದಾಣದ ಹತ್ತಿರ ಹೋಗಿ ಒಂದು ಜೀಪನಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದು ಆಗ ದಾಳಿ ಮಾಡಿ, ಮದ್ಯ ಖರೀದಿ ಮಾಡುತ್ತಿದ್ದ ವ್ಯಕ್ತಿಗಳು ಓಡಿ ಹೋಗಿದ್ದು, ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸ ವಿಚಾರಿಸಿದಾಗ ಆತನು ಮಹಾಂತಪ್ಪ ಎಂದು ತಿಳಿಸಿರುತ್ತಾನೆಂದು ತದ ನಂತರ ಆತನಿಗೆ ಮಧ್ಯವನ್ನು ಎಲ್ಲಿಂದ ತಂದೆ ಎಂದು ವಿಚಾರಿಸಿದಾಗ ಆತನು ಚೌಡಾಪೂರ ಸಾಯಿನಾಥ ವೈನ್ಸನ ಮಾಲೀಕನಾದ ಪ್ರವೀಣ ಗುತ್ತೇದಾರ ರವರ ಕಡೆಯಿಂದ ತಂದಿರುವುದಾಗಿ ತಿಳಿಸಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 10 ಪ್ರಾಸಾ-04 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಮದ್ಯವನ್ನು ಸಾಗನೂರಿನಲ್ಲಿ ಮಾರಾಟ ಮಾಡಲು ತಂದಿರುತ್ತೇನೆಂದು ತಿಳಿಸಿರುತ್ತಾನೆ. ದತ್ತಪ್ಪ ನಾಯ್ಕೋಡಿ, ಕಾಶಿನಾಥ ಬರುಟಿ, ಇನ್ನೊಬ್ಬ ವ್ಯಕ್ತಿಗೆ ಮಾರಾಟ ಮಾಡಲು ತಂದಿರುತ್ತೇನೆಂದು ತಿಳಿಸಿದ್ದು, ಹಾಗೂ ಆರೋಪಿತನ ಜೀಪಿನಲ್ಲಿ ಇದ್ದ ಮದ್ಯವನ್ನು ಪಂಚರ ಸಮಕ್ಷಮ ಶೋಧನೆ ಮಾಡಿದ್ದು ಆಗ 650 ಎಂಎಲ್ ನ ಕಿಂಗ್ ಫೀಶ್ರ ಬೀಯರನ 48 ಬಾಟಲಗಳು, 98 ಎಂಎಲ್ನ Original Choice 1056 ಟೇಟ್ರಾ ಪಾಕೇಟಗಳು ಹಾಗೂ 180 ಎಂಎಲ್ನ Original Choice 144 ಟೇಟ್ರಾ ಪಾಕೇಟಗಳು, 180 ಎಂಎಲ್ನ Old Traven 192 ಟೇಟ್ರಾ ಪಾಕೇಟಗಳು ಮತ್ತು ಆರೋಪಿಯು ಉಪಯೋಗಿಸಿದ ಕಮೊಂಡೋರ ಜೀಪ ಮತ್ತು ಆರೋಪಿಯ ಕಡೆ ಇದ್ದ ರೂ.1200/- ನಗದು ಹಣವನ್ನು ವಶಪಡಿಸಿಕೊಂಡು ಮುಂಜಾನೆ 10-40 ರಿಂದ 12-40 ರ ವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಬರೆದು ಅವರಿಂದ ಸಹಿ ಪಡೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 11 ಪ್ರಾಸಾ-04 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಜಪ್ತಿಪಡಿಸಿಕೊಂಡ ಮದ್ಯದ ಟೇಟ್ರಾ ಪಾಕೇಟಗಳ ತಲಾ ಒಂದರಂತೆ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಪಾಕೇಟಗಳನ್ನು ತೆಗೆದುಕೊಂಡು ಅವುಗಳಿಗೆ ತಮ್ಮ ಇಲಾಖೆಯ GJ ಅಂತಾ ಮುದ್ರೆಯನ್ನು ಹಾಕಿ ಸೀಲ್ ಮಾಡಿ ನಂತರ 4-ಜನ ಆರೋಪಿಗಳು ಮತ್ತು ದೊರೆತ ಮುದ್ದೇಮಾಲುಗಳನ್ನು ತೆಗೆದುಕೊಂಡು ಠಾಣೆಗೆ ಬಂದು ಚಾಸಾ-1 ರವರು ಸರಕಾರಿ ತರ್ಫೆ ದೂರನ್ನು ನೀಡಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 12 ಪ್ರಾಸಾ-04 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 15.03.2017 ರಂದು ತಾನು ಚಾಸಾ-12 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆಂದು ಹಾಗೂ ತಾನು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿದ್ದು, ತನಗೆ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಇರುವ ಒಂದು ಬೀಯರ ಬಾಟಲ್ ಮತ್ತು ಟೇಟ್ರಾ ಪಾಕೇಟಗಳನ್ನು ತನಗೆ ತೋರಿಸಿದ್ದು, ತಾನು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ರಿಂದ 4 ಎಂದು ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 13 ಪ್ರಾಸಾ-04 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನಗೆ ಜಪ್ತು ಪಡಿಸಿಕೊಂಡರು ಎಂದು ಹೇಳುವ ರೂ.500/- ಮುಖ ಬೆಲೆಯ 2 ನೋಟು ಮತ್ತು ರೂ.100/- ಮುಖ ಬೆಲೆಯ 2 ನೋಟುಗಳು ಆರೋಪಿಯಿಂದ ಜಪ್ತಿಪಡಿಸಿಕೊಂಡಿರುವ ರೂ.1200/- ಗಳನ್ನು ತಾನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೇಮಾಲು-5 ಎಂದು ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರಃ 14 ಪ್ರಾಸಾ-05 ಮಲ್ಲಪ್ಪ ತಂದೆ ತುಳಜಾರಾಮ ನಿವೃತ್ತ ಪಿ.ಎಸ್.ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 14.03.2017 ರಂದು ತಾನು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 01-40 ಕ್ಕೆ ಚಾಸಾ-1 ರವರು ಸಾಗನೂರು ಗ್ರಾಮದಿಂದ ಒಬ್ಬ ಆರೋಪಿ ಮುದ್ದೇಮಾಲು ಒಂದು ಜೀಪ ಜಪ್ತಿಪಡಿಸಿಕೊಂಡು ಒಂದು ಲಿಖಿತ ವರದಿಯೊಂದಿಗೆ ಆರೋಪಿತರ ವಿರುದ್ದ ದೂರು ದಾಖಲಿಸಲು ಸಲ್ಲಿಸಿರುತ್ತಾರೆಂದು ಹಾಗೂ ಸದರಿ ವರದಿ ಸಾರಾಂಶದ ಮೇರೆಗೆ ಠಾಣಾ ಗುನ್ನೆ ಸಂಖ್ಯೆಃ 27/2017ನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ: 15 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ: 13.03.2017 ರಂದು 1ನೇ ಆರೋಪಿ ಹೇಳಿಕೆ ಪಡೆದುಕೊಂಡಿರುತ್ತೇನೆಂದು ಹಾಗೂ ದಿನಾಂಕ: 14.03.2017 ರಂದು 4 ರಿಂದ 6ನೇ ಆರೋಪಿತರ ಹೇಳಿಕೆ ಪಡೆದುಕೊಂಡು, ದಿನಾಂಕ: 15.03.2017 ರಂದು ಚಾಸಾ-4 ರವರು ನೀಡಿದ ಗಣಕೀಕೃತ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡು ಅದೇ ದಿನ ಚಾಸಾ-4 ರಿಂದ 9 ರವರ ಹೇಳಿಕೆ ಪಡೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ: ಆ-1

ಆ-2

ಆ-3

ಆ-4

ಆ-5

ಆ-6

ಪ್ರ: 16 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ: 18.03.2017 ರಂದು ಚಾಸಾ-10 ರವರಿಂದ ಆರೋಪಿ ಪತ್ತೆ ಕುರಿತು ವರದಿ ಪಡೆದುಕೊಂಡು ದಿನಾಂಕ: 09.04.2017 ರಂದು ಉಪ ಅಧೀಕ್ಷಕರು ಆಳಂದ ಕಚೇರಿಯಿಂದ ಈ ಮದ್ಯದ ಕುರಿತು ವರದಿ ಬಂದಿದ್ದು ಸದರಿ ವರದಿ ಕಡತಕ್ಕೆ ಅಳವಡಿಸಿಕೊಂಡು ದಿನಾಂಕ: 17.04.2017 ರಂದು ಎಲ್ಲಾ ಆರೋಪಿತರ ವಿರುದ್ದ ಅಂತಿಮ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ-17 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಪ್ರ-18 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ ಆ-1

ಆ-2

ಆ-3

ಆ-4

ಆ-5

ಆ-6

(ಆರೋಪಿತನ ಹೇಳಿಕೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 05.02.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.